ಯಾವುದೇ ಇಬ್ಬರು ಮುಸ್ಲಿಮರು ಭೇಟಿಯಾಗಿ ಹಸ್ತಲಾಘವ ಮಾಡಿದರೆ, ಅವರು ಬೇರ್ಪಡುವ ಮೊದಲು ಅವರ ಪಾಪಗಳು ಕ್ಷಮಿಸಲ್ಪಡುತ್ತವೆ

ಬರಾಅ್ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಅಲ್ಲಾಹನ ಸಂದೇಶವಾಹಕರು (ಅವರ
ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ಯಾವುದೇ ಇಬ್ಬರು ಮುಸ್ಲಿಮರು
ಭೇಟಿಯಾಗಿ ಹಸ್ತಲಾಘವ ಮಾಡಿದರೆ, ಅವರು ಬೇರ್ಪಡುವ ಮೊದಲು ಅವರ ಪಾಪಗಳು ಕ್ಷಮಿಸಲ್ಪಡುತ್ತವೆ." [صحيح بمجموع طرقه] [رواه أبو داود والترمذي وابن ماجه وأحمد]

ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಇಲ್ಲಿ ತಿಳಿಸುವುದೇನೆಂದರೆ, ಯಾವುದೇ ಇಬ್ಬರು ಮುಸ್ಲಿಮರು ದಾರಿಯಲ್ಲಿ ಅಥವಾ ಅಂತಹುದೇ ಸ್ಥಳದಲ್ಲಿ ಭೇಟಿಯಾಗಿ ಒಬ್ಬರಿಗೊಬ್ಬರು ಹಸ್ತಲಾಘವ ಮಾಡಿದರೆ, ಅವರ ದೇಹಗಳು ಪರಸ್ಪರ ಬೇರ್ಪಡುವ ಮೊದಲು ಅಥವಾ ಅವರು ಹಸ್ತಲಾಘವವನ್ನು ಮುಗಿಸುವ ಮೊದಲು ಅವರ ಪಾಪಗಳು ಕ್ಷಮಿಸಲ್ಪಡುತ್ತವೆ.

http://www.sunnah.global/hadeeth/kn/show/6257